# ಹಾಡು ಕೆಟ್ಟ ಮೇಲೆ...

■ ವಿಶಾಖ ಎನ್.



ಸೊಂಟದ ಕೆಳಗಿನ ಸಾಹಿತ್ಯ ಬರೆದು ಇಡೀ ದೇಶದ ಎದುರು ಬೆತ್ತಲಾದ ಪ್ರಸಂಗಕ್ಕೆ ನಿರ್ದೇಶಕ ಪ್ರೇಮ್ ಅವಕಾಶ ಮಾಡಿಕೊಟ್ಟರು. ನೋರಾ ಫತೇಹಿ ಕೂಡ ಈ ಗೀತಸಾಹಿತ್ಯದ ನಿಜ ಅರ್ಥದ ಅರಿವೇ ತಮಗೆ ಇರಲಿಲ್ಲ ಎಂದು ಹೇಳಿದ ಮೇಲೆ ಪ್ರೇಮ್ ಸಾಹಿತ್ಯ ಬದಲಿಸಿ, ಹಾಡನ್ನು ತಿದ್ದುವುದಾಗಿ ತುಸು ಬೆಂಡಾದರು. ಕೇಳಿದ ಕ್ಷಮಾಪಣೆಯಲ್ಲೂ ಉಡಾಫೆಯಂತೂ ಇತ್ತು. ಈ ವಿದ್ಯಮಾನದ ಕುರಿತು ಕನ್ನಡ ಚಿತ್ರರಂಗದ ಗೀತರಚನಕಾರರು–ಸ್ವರ ಸಂಯೋಜಕರು–ನಿರ್ದೇಶಕರು–ಲೇಖಕರನ್ನು 'ಸುಧಾ' ಮಾತನಾಡಿಸಿತು. ಆಗ ಕೆಲವು ಸ್ವಾರಸ್ಯಕರ ಸಂಗತಿಗಳು, ಸಲಹೆಗಳು, ವಸ್ತುಸ್ಥಿತಿ, ಹಿಂದೆ ಆಗಿದ್ದ ತಪ್ಪು ಎಲ್ಲವೂ ವ್ಯಕ್ತಗೊಂಡವು. ಅದರ ಸಂಚಯ ಇಲ್ಲಿದೆ...



ನಟ, ನಿರ್ದೇಶಕ ಪ್ರೇಮ್

